# ಒಂಬತ್ತನೆಯ ತರಗತಿ – ಪ್ರಥಮ ಭಾಷೆ ಕನ್ನಡ

## ಶಿಕ್ಷಕರಿಗಾಗಿ ಸೂಚನೆಗಳು

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ.ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ.ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ.ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು ಮೂವತ್ತು ದಿನಗಳ ಸೇತುಬಂಧ ಸಾಹಿತ್ಯದಲ್ಲಿರುವ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಹಂತದಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆಒತ್ತು ನೀಡುವಂತಿರಬೇಕು.ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರುವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಒಂಬತ್ತನೆಯ ತರಗತಿಯ ಈ ಸಾಹಿತ್ಯದಲ್ಲಿ ಏಳು ಮತ್ತು ಎಂಟನೇಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

## ಒಂಬತ್ತನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಬಂಧ ಸಾಹಿತ್ಯ

| | ಕ್ಷೇತ್ರ : ಆಲಿಸುವುದು | | | |
|---|---|---|---|---|
| ದಿನ | ಅಪೇಕ್ಷಿತ ಕಲಿಕಾಫಲಗಳು | ಕಲಿಕಾಂಶಗಳು | ಸಲಹಾತ್ಮಕಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆ |
| 1 | * ಕಥೆ ,ಕವನ, ಕಥನಗೀತೆ, ಸಂಭಾಷಣೆ, ರೂಪಕ, ಪ್ರಹಸನಗಳನ್ನು ಆಲಿಸುವುದರೊಂದಿಗೆಅರ್ಥಮಾಡಿಕೊಳ್ಳುವರು. | * ಜನಪದ ಗೀತೆಯನ್ನು ಆಲಿಸಿ ಅರ್ಥೈಸಿಕೊಳ್ಳುತ್ತಾರೆ. | 1.1 ಹಳ್ಳಿ ಹಾಡು ಕೇಳು<br>1.2 ಸೋ ಎನ್ನಿರೇ…<br>1.3 ಸಂಭಾಷಣೆ ಕೇಳು ಉತ್ತರ ಹೇಳು<br>1.4 ಕೇಳೋಣ ನೆಚ್ಚಿನ ಹಾಡು | 1.1ಶಿಕ್ಷಕರು ಜನಪದ ಗೀತೆಯೊಂದನ್ನು ಹಾಡಿ/ ಮಕ್ಕಳಿಂದ ಹಾಡಿಸಿ/ ಧ್ವನಿಮುದ್ರಿಕೆಯ ಸಹಾಯದಿಂದ ಕೇಳಿಸಿ ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರಪಡೆಯಿರಿ.<br>1.2 ಸೋಬಾನೆ ಪದಗಳಂತಹ ಸಾಂಪ್ರದಾಯಿಕ ಹಾಡುಗಳನ್ನು ಕೇಳಿಸಿರಿ.<br>1.3 ಯಾವುದಾದರೊಂದು ನಾಟಕದ ಧ್ವನಿ ಮುದ್ರಿಕೆಯನ್ನು ಕೇಳಿಸಿ, ಸಂಭಾಷಣೆಯನ್ನು ಅರ್ಥೈಸಿ, ಅನುಕೂಲಿಸಿ.<br>1.4 ವಿದ್ಯಾರ್ಥಿಗಳ ನೆಚ್ಚಿನ ಗೀತೆಗಳನ್ನು ಹಾಡಿಸಿರಿ ಭಾವಾರ್ಥ ಅನುಕೂಲಿಸಿ. |
| 2 | | * ಕಥನ ಗೀತೆಯೊಂದನ್ನು ಆಲಿಸಿ | 2.1 ಗೀತೆ ಕೇಳು – ಕಥೆ ಹೇಳು | 2.1ವಿದ್ಯಾರ್ಥಿಗಳಿಗೆ ಕಥನ ಗೀತೆಯೊಂದನ್ನು ಕೇಳಿಸಿ ಅದನ್ನು ಕಥೆಯ ರೂಪದಲ್ಲಿಹೇಳಿಸಿ. (ಕನಿಷ್ಠ ಎರಡು ಗೀತೆಗಳು) |

| | | | | |
|---|---|---|---|---|
| | | ಅರ್ಥೈಸಿಕೊಳ್ಳುತ್ತಾರೆ. | 2.2 ಗೀತೆ ಕೇಳು – ಮೌಲ್ಯ ಹೇಳು<br>2.3 ಲಾವಣಿ ಕೇಳು – ಕಥೆ ಹೇಳು | ಮಾದರಿಕಥನಗೀತೆಗಳು:<br>1. ಹೇಳಿದ್ದುಸುಳ್ಳಾಗಬಹುದು…<br>2. ಕನ್ನಡನಾಡಿನವೀರರಮಣಿಯ…<br>2.2ಪುಣ್ಯಕೋಟಿ ಕಥನ ಗೀತೆಯನ್ನು ಕೇಳಿಸಿ ಅದರ ಪಾತ್ರಗಳ ಬಗ್ಗೆ ಮಾತನಾಡಿಸಿ.<br>2.3 ಐತಿಹಾಸಿಕ ಲಾವಣಿಗಳನ್ನು ಕೇಳಿಸಿ ಅದನ್ನು ಕಥೆಯ ರೂಪದಲ್ಲಿ ಹೇಳಿಸಿ. |
| 3 | | * ಸರಳ ಪದಗಳನ್ನು, ವಾಕ್ಯಗಳನ್ನು ಆಲಿಸಿ ಅರ್ಥೈಸಿಕೊಳ್ಳುತ್ತಾರೆ. | 3.1 ನೀವು ಹೇಳಿದ್ದು, ನಾವು ಕೇಳಿದ್ದು | 3.1ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಸರಳ ವಾಕ್ಯಗುಚ್ಛಗಳನ್ನು ಒಂದು ವಿದ್ಯಾರ್ಥಿಗೆ ಹೇಳಿ ಅದನ್ನು ಪಕ್ಕದ ವಿದ್ಯಾರ್ಥಿಯ ಕಿವಿಯಲ್ಲಿ ಹೇಳಿಸಿ. ಹೀಗೆ ಎಲ್ಲಾ ವಿದ್ಯಾರ್ಥಿಗಳ ಕಿವಿಯಲ್ಲಿ ಕೇಳಿಸಿ ಕೊನೆಯ ವಿದ್ಯಾರ್ಥಿಯಿಂದ ಜೋರಾಗಿ ಹೇಳಿಸಿರ. ನಂತರ ಮೊದಲ ವಿದ್ಯಾರ್ಥಿಯಿಂದಲೂ ವಾಕ್ಯಗುಚ್ಛವನ್ನು ಹೇಳಿಸಿ ಅದರಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಗುರುತಿಸಲು ತಿಳಿಸಿ. ಕಾರಣ ಚರ್ಚಿಸಿ.<br>ಮಾದರಿ: ಕೊಟ್ಟೂರಿನ ರಾಜನಿಗೆ ಮೂವರು ಮಕ್ಕಳು. ಅವರಲ್ಲಿಇಬ್ಬರು ಹೆಣ್ಣು ಮಕ್ಕಳು, ಒಬ್ಬನು ಮಗ. ಅವರಲ್ಲಿ ಒಬ್ಬಳು ಕಿವುಡಿ, ಒಬ್ಬಳು ಕುಂಟಿ, ಮಗ ಕುರುಡ. |
| | | | 3.2 ಹೆಸರು ಹೇಳಿ - ಬಹುಮಾನ ಗೆಲ್ಲಿ | 3.2 ಶಿಕ್ಷಕರು ಕನ್ನಡದ ಹತ್ತರಿಂದ ಹದಿನೈದು ಕವಿಗಳ/ ಕೃತಿಗಳ ಹೆಸರನ್ನು ಧ್ವನಿ ಮುದ್ರಣಗೊಳಿಸಿ ಅದನ್ನು ವಿದ್ಯಾರ್ಥಿಗಳಿಗೆ ಕೇಳಿಸಿ. ನಂತರ ತಾವು ಕೇಳಿಸಿಕೊಂಡ ಅಷ್ಟು ಕವಿಗಳ / ಕೃತಿಗಳ ಹೆಸರನ್ನು ಹೇಳಿಸಿ ಒಂದನ್ನು ಬಿಡದೆ |

| | | | | |
|---|---|---|---|---|
| | | | 3.3 ನಾಣ್ನುಡಿ ಕೇಳು – ಅರ್ಥ ಹೇಳು | ಹೇಳಿದ ವಿದ್ಯಾರ್ಥಿಗೆ/ಗಳಿಗೆ ಬಹುಮಾನ ನೀಡಿರಿ.<br>ಮಾದರಿ:ಕುವೆಂಪು, ಬೇಂದ್ರೆ, ಶಿವರಾಮ ಕಾರಂತರು, ದೇವನೂರು ಮಹಾದೇವ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಾರಾ ಅಬೂಬಕ್ಕರ್, ಎಚ್.ಎಸ್. ವೆಂಕಟೇಶ ಮೂರ್ತಿ ....<br>3.3 ನಾಣ್ನುಡಿಗಳನ್ನು ಹೇಳಿ ಅವುಗಳ ಅರ್ಥವನ್ನು ವಿದ್ಯಾರ್ಥಿಗಳಿಂದ ಹೇಳಿಸಿ. |
| ಕ್ಷೇತ್ರ : ಮಾತನಾಡುವುದು | | | | |
| 4 | * ಪರಿಚಿತ/ ಅಪರಿಚಿತ ಸನ್ನಿವೇಶ ಮತ್ತು ಘಟನೆಗಳನ್ನು, ವಿಷಯ-ವಿಚಾರಗಳನ್ನುಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡುವುದನ್ನು ಅರಿತುಕೊಳ್ಳುವರು. | * ವಿಷಯ, ವಿಚಾರಗಳನ್ನು ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುತ್ತಾರೆ. | 4.1 ಬಿಸಿ ಬಿಸಿ ಚರ್ಚೆ<br>4.2 ಶುಭನುಡಿ<br>4.3 ಅರಳಿ ಕಟ್ಟೆ ಹರಟೆ | 4.1ಯಾವುದಾದರೂ ಪ್ರಚಲಿತ ವಿಚಾರದ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಡಿಸಿ.<br>ಉದಾ: ಆನ್ ಲೈನ್ ಶಿಕ್ಷಣ, ಕೋವಿಡ್ - 19 ಇತ್ಯಾದಿ<br>4.2 ವಿದ್ಯಾರ್ಥಿಗಳೇ ಸಂಗ್ರಹಿಸಿ ತಂದ ಎರಡು/ಮೂರು ಸುಭಾಷಿತಗಳ ಅರ್ಥವನ್ನು ಹೇಳಲು ಅನುಕೂಲಿಸಿ.<br>4.3 ತರಗತಿ ಕೊಠಡಿಯೊಳಗೆ ಅರಳಿ ಕಟ್ಟೆ ವಾತಾವರಣವನ್ನು ಸೃಷ್ಟಿಸಿ ಅದರಲ್ಲಿ ಕೆಲವು ನಿರ್ದಿಷ್ಟ ವಿಷಯಗಳ ಕುರಿತು ಎರಡು ಗುಂಪಿನ ವಿದ್ಯಾರ್ಥಿಗಳಿಂದ ಪರ ವಿರೋಧವಾಗಿ ಮಾತನಾಡಿಸುವುದು.<br>ಉದಾ: ಬೆಲೆ ಏರಿಕೆ, ಲಾಕ್ ಡೌನ್ ಸಂದರ್ಭ, ಪ್ರವಾಹ ಪರಿಸ್ಥಿತಿ ಇತ್ಯಾದಿ |
| 5 | | * ಪರಿಚಿತವ್ಯಕ್ತಿ/ ವಸ್ತುಗಳ ಬಗ್ಗೆ ತಮ್ಮ ಅಭಿಪ್ರಾಯಗನ್ನು ವಿವರಿಸುತ್ತಾರೆ. | 5.1 ನನ್ನ ಆದರ್ಶ ವ್ಯಕ್ತಿ | 5.1ವಿದ್ಯಾರ್ಥಿಗಳಿಗೆ ತಮಗಿಷ್ಟವಾದ ಆದರ್ಶ ವ್ಯಕ್ತಿಯೊಬ್ಬರನ್ನು ಕುರಿತು ಮಾತನಾಡುವಂತೆ ಸೂಚಿಸಿ.<br>ಉದಾ: ಕವಿಗಳು, ಸಮಾಜ ಸುಧಾರಕರು, ಶಿಕ್ಷಕರು, ಸ್ವಾತಂತ್ರ್ಯ ಹೋರಾಟಗಾರರು. |

| | | | | |
|---|---|---|---|---|
| | | | 5.2 ನಾನು ನೀನಾಗಿದ್ದರೆ<br><br><br><br>5.3 ಅಣಕು ಸಂದರ್ಶನ | 5.2 ವಿದ್ಯಾರ್ಥಿಗಳು ತಾವು ಒಂದು ವಸ್ತು/ಪ್ರಾಣಿ/ಪಕ್ಷಿ ಎಂದು ಭಾವಿಸಿ ಅದನ್ನು ಕುರಿತು ಮಾತನಾಡಿಸಿ.<br>ಉದಾ: ನಾನೊಂದು ಮರ<br>ನಾನೊಂದು ನವಿಲು<br>5.3 ಒಬ್ಬ ವಿದ್ಯಾರ್ಥಿ ಸಂದರ್ಶನಕಾರನಾಗಿ, ಒಬ್ಬ ವಿದ್ಯಾರ್ಥಿ ನಿರ್ದಿಷ್ಟ ಕವಿಯಾಗಿ ಭಾಗವಹಿಸುವಂತೆ ಸಂದರ್ಶನ ಮಾಡಿಸಿ. |
| ಕ್ಷೇತ್ರ : ಓದುವುದು | | | | |
| 6 | *ಪದಭಂಡಾರವನ್ನು ಹೆಚ್ಚಿಸಿಕೊಂಡು ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯ ಬಂಧಗಳನ್ನು ಅರ್ಥ ಮಾಡಿಕೊಳ್ಳುವರು ಹಾಗೂ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಿಕೊಳ್ಳುವರು. | * ನಾಟಕದಲ್ಲಿನ ಸಂಭಾಷಣೆಗಳನ್ನು ಭಾವಪೂರ್ಣವಾಗಿ ಓದುತ್ತಾರೆ. | 6.1ಪಾತ್ರ ನೋಡು – ಸಂಭಾಷಣೆ ಓದು<br>6.2 ಸಂಭಾಷಣೆ ಓದು – ಪಾತ್ರ ಮಾಡು<br>6.3 ಓದು - ಅಭಿನಯಿಸು | 6.1ಪೌರಾಣಿಕ ನಾಟಕಗಳ ಸಂಭಾಷಣೆಯ ಪ್ರತಿಗಳನ್ನು ನೀಡಿ ಪಾತ್ರಗಳಿಗೆ ಅನುಗುಣವಾಗಿ ಓದಿಸಿ.<br>6.2 ಐತಿಹಾಸಿಕ ನಾಟಕಗಳ ಸಂಭಾಷಣೆಯ ಪ್ರತಿಗಳನ್ನು ನೀಡಿ ಓದಿಸಿ.<br>ಉದಾ: ಸಂಗೊಳ್ಳಿ ರಾಯಣ್ಣ, ಒನಕೆ ಓಬವ್ವ ಇತ್ಯಾದಿ<br>6.3 ಸಾಮಾಜಿಕ ನಾಟಕಗಳ ಸಂಭಾಷಣೆಯ ಪ್ರತಿಗಳನ್ನು ನೀಡಿ ಓದಿಸಿ. |
| 7 | | * ಮುದ್ರಿತ ಬರಹಗಳನ್ನು ಓದಿ ಅರ್ಥೈಸಿಕೊಳ್ಳುತ್ತಾರೆ. | 7.1 ಹೀಗೊಂದು ಪ್ರಕಟಣೆ<br><br>7.2 ನಮ್ಮನ್ನೂ ಓದಿ<br><br>7.3 ಸಂಗ್ರಹಿಸು - ಓದು | * ಮುದ್ರಿತ ಪ್ರಕಟಣೆಯನ್ನು ನೀಡಿ ಓದಿಸಿ.<br>ಉದಾ: ನೇಮಕಾತಿ ಪ್ರಕಟಣೆ, ಕಾಣೆಯಾದವರ ಪ್ರಕಟಣೆ ಇತ್ಯಾದಿ<br>* ಕೆಲವು ಸೂಚನಾ ಫಲಕಗಳ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಮಕ್ಕಳಿಂದ ಓದಿಸಿ.<br>ಉದಾ: ಮೃಗಾಲಯದಲ್ಲಿನ ಸೂಚನಾ ಫಲಕಗಳು, ದೇವಾಲಯದ ಸೂಚನಾ ಫಲಕಗಳು, ಆಸ್ಪತ್ರೆಯಲ್ಲಿನ ಸೂಚನಾ ಫಲಕಗಳು ಇತ್ಯಾದಿ.<br>7.3 ಕರಪತ್ರಗಳನ್ನು ಸಂಗ್ರಹಿಸಿ ಓದಿಸಿ. |

| | | | | |
|---|---|---|---|---|
| 8 | | * ಕೈಬರೆಹದ ಪತ್ರಗಳನ್ನುಓದಿ ಅ ರ್ಥೈಸಿಕೊಳ್ಳುತ್ತಾರೆ. | 8.1 ನನ್ನ ಗೆಳೆಯರ ಪತ್ರ<br><br>8.2 ಕೈ ಬರೆಹ ಓದು<br><br>8.3 ನಿನ್ನ ಬರೆಹ – ನನ್ನ ಓದು | 8.1 ವಿದ್ಯಾರ್ಥಿಗಳಿಂದಲೇ ವಿವಿಧ ವಿಷಯಗಳ ಕುರಿತು ಪತ್ರವನ್ನು ಬರೆಯಿಸಿ, ಅವುಗಳನ್ನು ಅದೇ ತರಗತಿಯ ಬೇರೆ ವಿದ್ಯಾರ್ಥಿಗಳಿಂದ ಓದಿಸಿ.<br>ಉದಾ: ಪ್ರವಾಸ ಪತ್ರ, ಪರೀಕ್ಷಾ ತಯಾರಿ ಕುರಿತ ಪತ್ರ, ಕೋವಿಡ್ – 19 ಕುರಿತ ಪತ್ರ ಇತ್ಯಾದಿ.<br>8.2ವಿವಿಧ ಪ್ರಸಿದ್ಧ ವ್ಯಕ್ತಿಗಳಕೈಬರೆಹದಪ್ರತಿಗಳನ್ನುಸಂಗ್ರಹಿಸಿ,ಓದಿಸಿ.<br><br>8.3 ತರಗತಿಯ ವಿವಿಧ ವಿಷಯಗಳ ಟಿಪ್ಪಣಿ ಪುಸ್ತಕಗಳನ್ನು(ನೋಟ್ಸ್) ಬೇರೆ ಬೇರೆ ವಿದ್ಯಾರ್ಥಿಗಳಿಂದ ಓದಿಸಿ. |
| 9 | | * ಸಾಹಿತ್ಯದ ವಿವಿಧ ಪ್ರಕಾರಗಳನ್ನು ಓದಿ ಅರ್ಥೈಸಿಕೊಳ್ಳುತ್ತಾರೆ. | 9.1 ಓದಿ ತಿಳಿ<br><br>9.2 ಓದಿ ಕಲಿ<br><br>9.3 ಓದಿ ನಲಿ | 9.1 ಹಳಗನ್ನಡ ಸಾಹಿತ್ಯದ ವಿವಿಧ ಕವಿಗಳ ಕೃತಿಗಳ ಆಯ್ದ ಭಾಗವನ್ನು ಓದಿಸಿ.<br>ಉದಾ: ಪಂಪ, ರನ್ನರ ಕೃತಿಗಳು<br>9.2 ನಡುಗನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಪ್ರಕಾರಗಳನ್ನು ಓದಿಸಿ.<br>ಉದಾ: ಷಟ್ಪದಿ, ತ್ರಿಪದಿ, ವಚನಗಳು, ಕೀರ್ತನೆಗಳು ಇತ್ಯಾದಿ<br>9.3 ಹೊಸಗನ್ನಡ ಸಾಹಿತ್ಯದ ವಿವಿಧ ಸಾಹಿತ್ಯ ಪ್ರಕಾರಗಳನ್ನು ಓದಿಸಿ.<br>ಉದಾ: ಲಲಿತ ಪ್ರಬಂಧ, ಚುಟುಕುಗಳು, ಸಣ್ಣ ಕಥೆಗಳು ಇತ್ಯಾದಿ |
| ಕ್ಷೇತ್ರ : ಬರೆಯುವುದು | | | | |
| 10 | * ಸರಳವಾಕ್ಯ, ಟಿಪ್ಪಣಿ, ಸಣ್ಣ | * ಚಿತ್ರಗಳನ್ನು ನೋಡಿ ಅರ್ಥಪೂರ್ಣ ವಾಕ್ಯಗಳನ್ನುರಚಿಸುತ್ತಾ | 10.1 ಚಿತ್ರ ನೋಡಿ ಪದ ಬರೆ<br>10.2ಚಿತ್ರ ನೋಡಿ | 10.1 ಒಂದು ಸನ್ನಿವೇಶದ ಚಿತ್ರವನ್ನು ನೀಡಿ ಅದರಲ್ಲಿರುವ ವ್ಯಕ್ತಿಗಳ/ವಸ್ತುಗಳ/ಪ್ರಾಣಿ-ಪಕ್ಷಿಗಳ ಹೆಸರನ್ನು ಬರೆಯಿಸಿ. |

| | | | | |
|---|---|---|---|---|
| | ಪ್ರಬಂಧಗಳನ್ನು ವ್ಯಾಕರಣ ದೋಷವಿಲ್ಲದೆ ಬರೆಯುವುದನ್ನು ಕಲಿಯುವರು. | ರೆ. | ವಾಕ್ಯ ಮಾಡಿ<br><br>10.3 ಚಿತ್ರಕ್ಕೊಂದು ಅರ್ಥ | 10.2ವಿವಿಧ ರೀತಿಯ ಚಿತ್ರಗಳನ್ನು ನೀಡಿ ಅವುಗಳನ್ನು ಕುರಿತು ಸರಳ ವಾಕ್ಯಗಳನ್ನು ರಚಿಸುವಂತೆ ತಿಳಿಸಿ.<br>ಮಾದರಿ: ನವಿಲಿನ ಚಿತ್ರ: ನವಿಲು ಅತ್ಯಂತ ಸುಂದರವಾಗಿದ್ದು, ನಮ್ಮ ರಾಷ್ಟ್ರೀಯ ಪಕ್ಷಿಯಾಗಿದೆ.<br>ಉದಾ: ಸೂರ್ಯೋದಯದ ಚಿತ್ರ, ಪರಿಸರದ ಚಿತ್ರ, ಬೆಟ್ಟದ ಚಿತ್ರ ಇತ್ಯಾದಿ.<br>10.3 ಒಂದು ಸನ್ನಿವೇಶದ ಚಿತ್ರ ನೀಡಿ ಅದಕ್ಕೆ ಟಿಪ್ಪಣಿ ಬರೆಯಿಸಿ. |
| 11 | | * ನುಡಿಗಟ್ಟುಗಳನ್ನು ಬಳಸಿಕೊಂಡು ಅರ್ಥಪೂರ್ಣವಾಕ್ಯಗಳನ್ನುರಚಿಸುತ್ತಾರೆ. | 11.1 ಕಟ್ಟು - ನುಡಿಗಟ್ಟು<br>11.2 ನುಡಿಗಟ್ಟು – ವಾಕ್ಯ ಕಟ್ಟು<br><br>11.3 ನುಡಿಗಟ್ಟು – ಟಿಪ್ಪಣಿ ಕಟ್ಟು | 11.1 ತಮಗೆ ತಿಳಿದಿರುವ ನುಡಿಗಟ್ಟುಗಳನ್ನು ಬರೆಯಿಸಿ.<br>11.2 ಸರಳವಾದ ನುಡಿಗಟ್ಟುಗಳ ಮಿಂಚುಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅವರಿಗೆ ಬಂದಿರುವ ನುಡಿಗಟ್ಟಿಗೆ ಸಂಬಂಧಿಸಿದಂತೆ ವಾಕ್ಯಗಳನ್ನು ಬರೆಯಲು ಸೂಚಿಸಿ.<br>ಉದಾ: ತಲೆನೋವು, ಕಣ್ಣೀರಿ, ಹೊಟ್ಟೆಕಿಚ್ಚು ಮುಂತಾದ ಸರಳ ನುಡಿಗಟ್ಟುಗಳು.<br>11.3 ನುಡಿಗಟ್ಟುಗಳನ್ನು ಬಳಸಿ ವಾಕ್ಯವೃಂದವನ್ನು ರಚಿಸಲು ತಿಳಿಸಿ. |
| 12 | | * ಒಂದು ನಿರ್ದಿಷ್ಟ ವಿಷಯ/ ವ್ಯಕ್ತಿ/ ವಿಚಾರವನ್ನು ಕುರಿತು ಸರಳವಾದ ಟಿಪ್ಪಣಿ ರಚಿಸುತ್ತಾರೆ. | 12.1ಚರ್ಚಿಸು - ಬರೆ<br><br>12.2 ವ್ಯಕ್ತಿ ಚಿತ್ರಣ | 12.1 ಗುಂಪುಗಳಾಗಿ ವಿಂಗಡಿಸಿ ಗುಂಪಿಗೊಂದು ಸರಳ ವಿಷಯಗಳನ್ನು ನೀಡಿ ಟಿಪ್ಪಣಿ ಬರೆಯಿಸಿ.<br>ಉದಾ: ಶಾಲೆ, ಮನೆ, ಕ್ರೀಡೆಗಳು, ಹಬ್ಬಗಳುಇತ್ಯಾದಿ<br>12.2 ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಕುರಿತು ಟಿಪ್ಪಣಿ ಬರೆಯಿಸಿ. |

| | | | | |
|---|---|---|---|---|
| | | | 12.3 ವಿಚಾರ ಮಂಡನೆ | ಉದಾ: ಡಾ. ಅಬ್ದುಲ್ ಕಲಾಂ, ಸಾಲು ಮರದ ತಿಮ್ಮಕ್ಕ ಇತ್ಯಾದಿ<br>12.3 ಒಂದು ನಿರ್ದಿಷ್ಟ ವಿಚಾರವನ್ನು ಕುರಿತು ಟಿಪ್ಪಣಿ ಬರೆಯಿಸಿ.<br>ಉದಾ: ಕೋವಿಡ್ ಹರಡುವಿಕೆ, ಪರಿಸರ ಸಂರಕ್ಷಣೆ ಇತ್ಯಾದಿ |
| 13 | * ಸಾಹಿತ್ಯದ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಅದರ ಮುಖ್ಯಾಂಶಗಳನ್ನು ಲಿಖಿತವಾಗಿಅಭಿವ್ಯಕ್ತಿಸುವರು. | * ಗದ್ಯ ಸಾಹಿತ್ಯ ಪ್ರಕಾರಗಳನ್ನು ಗ್ರಹಿಸಿ ಮುಖ್ಯಾಂಶವನ್ನುಲಿಖಿತವಾಗಿ ಅಭಿವ್ಯಕ್ತಿಸುತ್ತಾರೆ. | 13.1 ಕಥೆ ಓದು –<br>ಉತ್ತರ ಹುಡುಕು<br>13.2 ನಾಟಕ ಓದು – ಉತ್ತರ ಹುಡುಕು<br>13.3 ಗದ್ಯ ಓದು – ಉತ್ತರ ಹುಡುಕು | 13.1 ನಿರ್ದಿಷ್ಟಸರಳ ಕಥಾ ಭಾಗದ ಒಂದು ಖಂಡಿಕೆಯನ್ನು ನೀಡಿ ಅದರ ಮುಖ್ಯಾಂಶಗಳು ಹೊರ ಹೊಮ್ಮುವಂತೆ ಪ್ರಶ್ನೆಗಳನ್ನು ನೀಡಿ ಉತ್ತರ ಬರೆಯಿಸಿ.<br>13.2 ನಿರ್ದಿಷ್ಟ ನಾಟಕದ ಒಂದು ದೃಶ್ಯವನ್ನು ನೀಡಿ ಅದರ ಮುಖ್ಯಾಂಶಗಳು ಹೊರ ಹೊಮ್ಮುವಂತೆ ಪ್ರಶ್ನೆಗಳನ್ನು ನೀಡಿ ಉತ್ತರ ಬರೆಯಿಸಿ.<br>13.3 ಹಳಗನ್ನಡ ಸಾಹಿತ್ಯದ ನಿರ್ದಿಷ್ಟ ಖಂಡಿಕೆಯನ್ನು ನೀಡಿ ಅದರ ಮುಖ್ಯಾಂಶಗಳು ಹೊರಹೊಮ್ಮುವಂತೆ ಪ್ರಶ್ನೆಗಳನ್ನು ನೀಡಿ ಉತ್ತರ ಬರೆಯಿಸಿ. |
| 14 | | * ಪದ್ಯ ಸಾಹಿತ್ಯ ಪ್ರಕಾರಗಳನ್ನು ಗ್ರಹಿಸಿ ಸಾರಾಂಶವನ್ನು ಲಿಖಿತವಾಗಿ ಅಭಿವ್ಯಕ್ತಿಸುತ್ತಾರೆ. | 14.1ಗೀತೆ ಓದು – ಸಾರಾಂಶ ಬರೆ<br>14.2 ವಚನ ಓದು – ಸಾರಾಂಶ ಬರೆ<br>14.3 ಕೀರ್ತನೆ ಓದು – ಸಾರಾಂಶ ಬರೆ | 14.1 ಭಾವಗೀತೆಯಚರಣವೊಂದಕ್ಕೆ ಸಾರಾಂಶವನ್ನುಬರೆಯಿಸಿ.<br>14.2 ಯಾವುದಾದರೊಂದು ವಚನಕ್ಕೆ ಸಾರಾಂಶವನ್ನುಬರೆಯಿಸಿ.<br>14.3 ಯಾವುದಾದರೊಂದು ಕೀರ್ತನೆಯ ಸಾರಾಂಶವನ್ನು ಬರೆಯಿಸಿ. |

| | | | | |
|---|---|---|---|---|
| 15 | * ತಮ್ಮ ಕಲ್ಪನೆ ಮತ್ತು ಸೃಜನಶೀಲತೆ ಬಳಸಿ ಸ್ವರಚಿತಪದ್ಯ, ಕಥೆ, ನಾಟಕ ಇತ್ಯಾದಿಗಳನ್ನು ಬರೆಯುವರು. | * ಸೃಜನಶೀಲ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. | 15.1 ಸುಳುಹು – ಹೊಳಹು<br><br>15.2 ನಾಟಕ ಕಥೆಯಾದಾಗ…<br><br>15.3 ಚಿತ್ರಕ್ಕೊಂದು ಕವಿತೆ | 15.1 ಶಿಕ್ಷಕರು ಒಂದು ಕಥೆಯ ಸುಳಿವುಗಳನ್ನು ಆಧರಿಸಿದ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ವಿದ್ಯಾರ್ಥಿಗಳಿಗೆ ನೀಡಿ ಪೂರ್ಣ ಕಥೆಯನ್ನು ರಚಿಸುವಂತೆ ಹೇಳಿ ಕಥೆಗೆ ಶೀರ್ಷಿಕೆ ನೀಡಲು ತಿಳಿಸುವುದು.<br>ಮಾದರಿ: ಕಾಡು-ರಾಜ ಸಿಂಹ- ದಿನಕ್ಕೊಂದು ಪ್ರಾಣಿ ಆಹಾರ-ಮೊಲದ ಸರದಿ-ತಡವಾಗಿ ಬಂದ ಮೊಲ-ಬಾವಿಯಲ್ಲಿ ಪ್ರತಿಬಿಂಬ-ಮೂರ್ಖ ಸಿಂಹ-ಪ್ರಾಣಬಿಟ್ಟಿತು.<br>15.2 ಕೆಲವು ನಾಟಕಗಳ ಪ್ರತಿಗಳನ್ನು ನೀಡಿ ಅವುಗಳನ್ನು ಓದಿಕೊಂಡು ಕಥಾರೂಪದಲ್ಲಿ ಬರೆಯಲು ಸೂಚಿಸಿ.<br>ಉದಾ: ಯಶೋಧರೆ ನಾಟಕ, ಬಿಲ್ಲಹಬ್ಬ ನಾಟಕ ಇತ್ಯಾದಿ.<br>15.3 ನಿರ್ದಿಷ್ಟ ಸಂದೇಶ ಸಾರುವ ಚಿತ್ರವನ್ನುಪ್ರದರ್ಶಿಸಿ ವಿದ್ಯಾರ್ಥಿಗಳಿಗೆ ಆ ಚಿತ್ರವನ್ನು ಕುರಿತು ಕವಿತೆ ಬರೆಯುವಂತೆ ತಿಳಿಸಿ. |
| 16 | * ಸೈದ್ಧಾಂತಿಕ ವ್ಯಾಕರಣ ನಿಯಮಗಳನ್ನು ಅರಿತು ಪ್ರಾಯೋಗಿಕವಾಗಿ ಬಳಸುವರು. | * ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳ ಸ್ಥಾನವನ್ನು ಗುರುತಿಸುತ್ತಾರೆ ಮತ್ತು ಅವುಗಳನ್ನು ಸರಿಯಾಗಿ ಬಳಸುತ್ತಾರೆ. | 16.1 ನಮ್ಮನ್ನು ಗುರುತಿಸಿ<br><br>16.2 ಅದಲು – ಬದಲು | 16.1ಹಲವು ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಅವುಗಳಲ್ಲಿ ಕರ್ತೃ,ಕರ್ಮ,ಕ್ರಿಯಾಪದಗಳನ್ನು ಗುರುತಿಸಲು ಸೂಚಿಸಿ.<br>16.2 ವಾಕ್ಯದಲ್ಲಿ ಅದಲು – ಬದಲು ಮಾಡಿದ ಪದಗಳುಳ್ಳ ಮಿಂಚುಪಟ್ಟಿಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಗೆ ನೀಡಿ ಅರ್ಥಪೂರ್ಣ ವಾಕ್ಯ ಮಾಡುವಂತೆ ಸೂಚಿಸುವುದು.<br>ಮಾದರಿ: 1. ಜ್ಞಾನಪೀಠ/ದೊರಕಿದೆ/ಶ್ರೀರಾಮಾಯಣ ದರ್ಶನಂ/ಕುವೆಂಪು/ ಅವರ/ಕೃತಿಗೆ /ಪ್ರಶಸ್ತಿ<br>➔ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ |

| | | | | |
|---|---|---|---|---|
| | | | 16.3 ಕರ್ತರಿ - ಕರ್ಮಣಿ | ಪ್ರಶಸ್ತಿ ದೊರಕಿದೆ.<br>16.3 ಕರ್ತರಿ ವಾಕ್ಯಗಳನ್ನು ಕರ್ಮಣಿ ವಾಕ್ಯಗಳಾಗಿ, ಕರ್ಮಣಿ ವಾಕ್ಯಗಳನ್ನು ಕರ್ತರಿ ವಾಕ್ಯಗಳಾಗಿ ಬದಲಿಸಿ ಬರೆಯಿಸಿ. |
| 17 | | * ಸಂಧಿಗಳನ್ನು ಗುರುತಿಸಿ ಲಕ್ಷಣಗಳನ್ನು ಅರ್ಥೈಸಿಕೊಳ್ಳುತ್ತಾರೆ. | 17.1 ಸಂಧಿ – ಪದ ಬಂಧಿ<br><br>17.2 ನಮ್ಮನ್ನು ಹುಡುಕಿ<br><br>17.3 ಗುರುತಿಸಿ – ಒಂದಾಗಿ ಸೇರಿ | 17.1 ಕಪ್ಪು ಹಲಗೆಯ ಮೇಲೆ ಒಂದು ವೃತ್ತವನ್ನು ಬರೆದು ಅದರಲ್ಲಿ ಸಂಧಿ ಪದಗಳನ್ನು ಬರೆಯಿರಿ. ವಿದ್ಯಾರ್ಥಿಗಳು ಅವುಗಳನ್ನು ಓದಿಕೊಂಡು ಆ ಪದಗಳು ಯಾವ ಸಂಧಿ ಪ್ರಕಾರಕ್ಕೆ ಸೇರಿವೆ ಎಂಬುದನ್ನು ಗುರುತಿಸಿ ಅವುಗಳನ್ನು ಬಿಡಿಸಿ ಬರೆಯಲು ಸೂಚಿಸಿ.<br>ಮಾದರಿ:<br>ಮನೆಯನ್ನು ಮಗುವಿಗೆ<br>ಊರೂರು ದೇವಾಲಯ ಮಹರ್ಷಿ<br>ತನ್ಮಯ ಸಿರಿಗನ್ನಡಮಳೆಗಾಲ ಅಬ್ಧಿ<br>ಬುಟ್ಟಿ ಏಕೈಕ ವನೌಷಧ<br>17.2 ಸಂಧಿ ಪದಗಳುಳ್ಳ ಗದ್ಯ ಭಾಗವೊಂದನ್ನು ನೀಡಿ ಅದರಲ್ಲಿರುವ ಸಂಧಿ ಪದಗಳನ್ನು ಗುರುತಿಸಿ ಬರೆದು, ಸಂಧಿ ಹೆಸರಿಸಲು ಸೂಚಿಸಿ.<br>17.3 ಸಂಧಿ ಪದಗಳುಳ್ಳ ಮಿಂಚು ಪಟ್ಟಿಗಳನ್ನು ನೀಡಿ, ಅವುಗಳನ್ನು ಬಿಡಿಸಿ ಬರೆಯಲು ಸೂಚಿಸಿ, ನಂತರ ಒಂದೇ ಪ್ರಕಾರದ ಸಂಧಿ ಪದಗಳನ್ನು ಪಡೆದ ವಿದ್ಯಾರ್ಥಿಗಳು ಗುಂಪು ಮಾಡಲು ಸೂಚಿಸಿ. |

<table>
<tr>
<td>18</td>
<td rowspan="2"></td>
<td>* ನಾಮ ಪದಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ.</td>
<td>18.1 ನಾನು ಯಾರು? ನೀವು ಹೇಳಿ<br><br>18.2 ಅಡಗಿರುವೆ ನಾನು, ಹುಡುಕ ಬಲ್ಲೆಯ ನೀನು?<br><br>18.3 ಗುರುತಿಸಿ - ಗುಂಪು ಸೇರಿಸಿ</td>
<td>18.1 ರೂಢನಾಮ, ಅನ್ವರ್ಥನಾಮ, ಅಂಕಿತನಾಮ ಪದಗಳಿಗೆ ಸಂಬಂಧಿಸಿದ ಚಿತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಅವುಗಳನ್ನು ಗುರುತಿಸಿ ಬರೆಯುವಂತೆ ತಿಳಿಸಿ.<br>ಉದಾ: ರೈತ, ಕುವೆಂಪು, ನದಿ, ಹಿಮಾಲಯ ಪರ್ವತ, ಶಿಕ್ಷಕ, ವೈದ್ಯ ಮುಂತಾದ ಚಿತ್ರಗಳು.<br>18.2 ನಾಮಪದ ಪ್ರಕಾರಗಳ ಉದಾಹರಣೆಯ ಪದಗಳ ಪದಬಂಧಗಳನ್ನು ತಯಾರಿಸಿ, ವಿದ್ಯಾರ್ಥಿಗಳ ಗುಂಪಿಗೆ ನೀಡಿ ಅದರಲ್ಲಿ ಅಡಗಿರುವ ಪದಗಳನ್ನು ಹುಡುಕಲು ಸೂಚಿಸುವುದು.<br><br>ಮಾದರಿ:
<table>
<tr><td>ನಾ</td><td>ಸ</td><td>ಯಾ</td><td>ಅ</td><td>ಹೊ</td><td>ನಾ</td><td>ಲ್ವ</td><td>ಡಿ</td><td>ಜ</td><td>ಮ</td></tr>
<tr><td>ಯೃ</td><td>ಣ</td><td>ನೀ</td><td>ನು</td><td>ಕಿ</td><td>ಇ</td><td>ಟೋ</td><td>ಬಿ</td><td>ಟ</td><td>ನೃ</td></tr>
<tr><td>ಪು</td><td>ಲಿ</td><td>ರೈ</td><td>ಬೆಂ</td><td>ಕೆಂ</td><td>ಋ</td><td>ಬ</td><td>ಡ</td><td>ಗ</td><td>ಣ</td></tr>
<tr><td>ಪೋ</td><td>ಟ್ಟ</td><td>ಳಿ</td><td>ಟ್ಟ</td><td>ಪು</td><td>ಡೊ</td><td>ಞ</td><td>ನ್ರ</td><td>ದಾ</td><td>ನೀ</td></tr>
<tr><td>ತ್ಯ</td><td>ಝ</td><td>ಮ</td><td>ಈ</td><td>ವಿ</td><td>ಗ್ರಾ</td><td>ಷ್ಟ</td><td>ರ್ಶ</td><td>ಸೂ</td><td>ದ</td></tr>
<tr><td>ಚ್ಚ</td><td>ವೋ</td><td>ಕ್ಕೊ</td><td>ಗು</td><td>ಫ</td><td>ಐಂ</td><td>ಅ</td><td>ನೀ</td><td>ಜೂ</td><td>ಮ</td></tr>
<tr><td>ಳು</td><td>ಖ</td><td>ನ್ಯ</td><td>ಬೆ</td><td>ಹ್ರ</td><td>ಮೇ</td><td>ಕು</td><td>ತ್ಸ</td><td>ಐ</td><td>ದು</td></tr>
</table>
18.3 ಒಂದು ನಿರ್ದಿಷ್ಟ ಗದ್ಯಭಾಗದಲ್ಲಿ ಬರುವ ನಾಮಪದಗಳನ್ನು ಗುರುತಿಸಿ ಪಟ್ಟಿ ಮಾಡಿಸಿ, ಅವುಗಳ ಪ್ರಕಾರಕ್ಕೆ ತಕ್ಕಂತೆ ವಿಂಗಡಿಸಿ ಬರೆಯಿಸಿ.</td>
</tr>
<tr>
<td>19</td>
<td>*ವಿಭಕ್ತಿ ಪ್ರತ್ಯಯಗಳನ್ನುಗುರುತಿ</td>
<td>19.1 ಪ್ರಕೃತಿಗೆ ಪ್ರತ್ಯಯ<br>19.2 ಪ್ರತ್ಯಯ ಹಚ್ಚು - ವಾಕ್ಯ ರಚಿಸು</td>
<td>19.1 ವಿಭಕ್ತಿ ಪ್ರತ್ಯಯದ ಚಾರ್ಟ್ ನೀಡಿ ಅದರ ಸಹಾಯದಿಂದ ನಾಮಪ್ರಕೃತಿಗೆ ಪ್ರತ್ಯಯಗಳನ್ನು ಹಚ್ಚಲು ಸೂಚಿಸುವುದು.</td>
</tr>
</table>

| | | | | |
|---|---|---|---|---|
| | | ಸಿ<br>ಅರ್ಥೈಸಿಕೊಳ್ಳುತ್ತಾರೆ. | 19.3 ಪತ್ತೆ ಹಚ್ಚು – ಅರ್ಥ ತಿಳಿಸು | 19.2 ನಾಮಪ್ರಕೃತಿಗೆವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಅರ್ಥಪೂರ್ಣ ವಾಕ್ಯ ರಚಿಸಲು ಮಾರ್ಗದರ್ಶನ ನೀಡುವುದು.<br>ಮಾದರಿ: ~ಹುಲಿಯು ನಮ್ಮ ರಾಷ್ಟ್ರೀಯ ಪ್ರಾಣಿಯಾಗಿದೆ.<br>~ಹುಲಿಯನ್ನು ಮಾಂಸಾಹಾರಿ ಪ್ರಾಣಿ ವರ್ಗಕ್ಕೆ ಸೇರಿಸಲಾಗಿದೆ.<br>~ಹುಲಿಯಿಂದ ಹಸುಗಳು ಬೆದರಿದವು.<br>~ಹುಲಿಗೆ ಜಿಂಕೆಯ ಮಾಂಸವೆಂದರೆ ತುಂಬಾ ಇಷ್ಟ.<br>~ಹುಲಿಯ ದೆಸೆಯಿಂದ ಜಿಂಕೆಗಳು ಹೆದರಿ ಓಡಿ ಹೋದವು.<br>~ಹುಲಿಯ ಅಂಗಾಲನ್ನು ಪಂಜಾ ಎಂದು ಕರೆಯುತ್ತಾರೆ.<br>~ಹುಲಿಯಲ್ಲಿ ಶೌರ್ಯದ ಗುಣವನ್ನು ಕಾಣಬಹುದು.<br>19.3 ನಿರ್ದಿಷ್ಟ ಗದ್ಯಭಾಗದಲ್ಲಿನ ನಾಮಪದಗಳನ್ನು ಗುರುತಿಸಿ ಪಟ್ಟಿ ಮಾಡಿ ಅವುಗಳ ಕಾರಕಾರ್ಥಗಳನ್ನು ಬರೆಯಿಸಿ. |
| 20 | | * ತತ್ಸಮ – ತದ್ಭವ ಪದಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 20.1 ನೆನೆ – ಬರೆ<br>20.2 ನೋಡಿ - ಮಾಡಿ<br>20.3 ನನ್ನಿಂದ ನೀನು | 20.1 ತಮಗೆ ತಿಳಿದಿರುವ ತತ್ಸಮ – ತದ್ಭವ ಪದಗಳನ್ನು ಪಟ್ಟಿ ಮಾಡಲು ತಿಳಿಸುವುದು.<br>20.2 ತತ್ಸಮ ತದ್ಭವ ಪದಗಳ ಮಿಂಚು ಪಟ್ಟಿಗಳನ್ನು ನೀಡಿ ಅವುಗಳನ್ನು ತತ್ಸಮ ತದ್ಭವಗಳಾಗಿ ವಿಂಗಡಿಸಿ ಬರೆಯಲು ಸೂಚಿಸಿ.<br>20.3 ತತ್ಸಮ – ತದ್ಭವ ಪದಗಳ ಮಿಂಚು ಪಟ್ಟಿಗಳನ್ನು ತಯಾರಿಸಿಕೊಂಡು ಅದನ್ನು ವಿದ್ಯಾರ್ಥಿಗಳಿಗೆ ನೀಡಿ ತತ್ಸಮ ಪದಗಳಿಗೆ ತದ್ಭವ ಪದಗಳನ್ನು |

| | | | | |
|---|---|---|---|---|
| | | | | ಹೊಂದಿಸಲು ಸೂಚಿಸಿ. |
| 21 | | * ಸಮಾಸಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 21.1 ಬಂಧ ಬಿಡಿಸು<br><br>21.2 ಬಿಡಿಸಿ - ಹೆಸರಿಸಿ<br><br>21.3 ಗುರುತಿಸಿ - ಹೆಸರಿಸಿ | 21.1 ಸಮಾಸ ಪದಗಳನ್ನು ನೀಡಿ ಅವುಗಳನ್ನು ಸರಿಯಾದ ಕ್ರಮದಲ್ಲಿ ವಿಗ್ರಹವಾಕ್ಯ ಮಾಡುವಂತೆ ತಿಳಿಸುವುದು.<br>21.2 ಕಪ್ಪು ಹಲಗೆಯ ಮೇಲೆ ಕೆಲವು ಸಮಾಸ ಪದಗಳನ್ನು ಬರೆದು ಅವುಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯುವಂತೆ ಸೂಚಿಸಿ.<br>21.3 ಸಮಾಸಗಳಿರುವ ಕೆಲವು ವಾಕ್ಯಗಳನ್ನು ನೀಡಿ ಅವುಗಳಲ್ಲಿರುವ ಸಮಾಸ ಪದಗಳನ್ನು ಗುರುತಿಸಿ ಬರೆದು ಅದರ ಸಮಾಸವನ್ನು ಹೆಸರಿಸಲು ಸೂಚಿಸುವುದು.<br>ಮಾದರಿ: ಕೊಳದಲ್ಲಿ ಕೆಂದಾವರೆ ಹೂಗಳು ಅರಳಿ ನಿಂತಿವೆ.<br>➔ ಕೆಂದಾವರೆ – ಕೆಂಪಾದ + ತಾವರೆ = ಕರ್ಮಧಾರೆಯ ಸಮಾಸ |
| 22 | | * ಕ್ರಿಯಾ ಪದಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 22.1 ಹುಡುಕಿ – ಪಡೆ<br><br>22.2 ಕ್ರಿಯಾ ಮೂಲ ಹುಡುಕು<br>22.3 ಕ್ರಿಯಾಪದ ರಚಿಸು | 22.1 ವಾಕ್ಯಗಳನ್ನು ನೀಡಿ ಅವುಗಳಲ್ಲಿ ಕ್ರಿಯಾಪದಗಳನ್ನು ಗುರುತಿಸಿ ಪಟ್ಟಿ ಮಾಡಿಸಿ, ಬಿಡಿಸಿ ಬರೆಯಿಸಿ.<br>ಉದಾ: ಬರೆಯುವಳು=ಬರೆ+ವ್+ಅಳು<br>22.2 ಕ್ರಿಯಾಪದಗಳನ್ನು ನೀಡಿ ಅವುಗಳಲ್ಲಿನ ಧಾತುಗಳನ್ನು ಗುರುತಿಸಿ ಬರೆಯಲು ಸೂಚಿಸಿ.<br>ಉದಾ: ಬಂದನು = ಬಾ (ಧಾತು)<br>22.3 ಹಲವು ಧಾತುಗಳನ್ನು ನೀಡಿ ಅವುಗಳಿಗೆ ಕ್ರಿಯಾಪದಗಳನ್ನು ರಚಿಸಲು ತಿಳಿಸಿ. |

| | | | | |
|---|---|---|---|---|
| | | | | ಉದಾ: ಧಾತು + ಕಾಲಸೂಚಕ ಪ್ರತ್ಯಯ+ ಆಖ್ಯಾತ ಪ್ರತ್ಯಯ =ಕ್ರಿಯಾಪದ<br>ಮಲಗು + ಉತ್ತ್ + ಆಳೆ = ಮಲಗುತ್ತಾಳೆ<br>(ಸೂಚನೆ: ಲಿಂಗ ಮತ್ತು ವಚನಗಳಿಗನುಸಾರವಾಗಿ ಕ್ರಿಯಾಪದದ ರಚನೆ ಮಾಡಿಸಿ) |
| 23 | | * ವಾಕ್ಯ ಪ್ರಕಾರಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 23.1 ವಾಕ್ಯ ವಿಂಗಡಿಸು<br>23.2 ಅದರಿಂದ ಇದಕ್ಕೆ – ಇದರಿಂದ ಅದಕ್ಕೆ<br>23.3 ವಾಕ್ಯ ರಚಿಸು | 23.1 ಹಲವು ವಾಕ್ಯವೃಂದಗಳನ್ನು ಬರೆಯಿಸಿ, ಅವುಗಳನ್ನು ವಾಕ್ಯ ಪ್ರಕಾರಗಳಿಗನುಗುಣವಾಗಿ ವಿಂಗಡಿಸಿ ಬರೆಯಿಸಿ.<br>23.2 ಸಾಮಾನ್ಯ ವಾಕ್ಯಗಳನ್ನು ನೀಡಿ ಅವುಗಳನ್ನು ಸಂಯೋಜಿತ ವಾಕ್ಯಗಳಾಗಿಯೂ, ಮಿಶ್ರವಾಕ್ಯಗಳಾಗಿಯೂ ಬರೆಯಿಸಿ.<br>23.3 ಪ್ರತೀ ವಾಕ್ಯ ಪ್ರಕಾರಕ್ಕೂ ಹತ್ತು ಉದಾಹರಣೆ ವಾಕ್ಯಗಳನ್ನು ರಚಿಸುವಂತೆ ಸೂಚಿಸಿ. |
| 24 | | * ಲೇಖನ ಚಿಹ್ನೆಗಳನ್ನು ಗುರುತಿಸಿ, ಸರಿಯಾಗಿ ಪ್ರಯೋಗಿಸುತ್ತಾರೆ. | 24.1 ಲೇಖನ ಚಿಹ್ನೆಗಳ ಚಾರ್ಟ್<br>24.2 ಲೇಖನ ಚಿಹ್ನೆ ಹೊಂದಿಸು<br>24.3 ನನ್ನ ಜಾಗ ತೋರಿಸು | 24.1 ಲೇಖನ ಚಿಹ್ನೆಗಳ ಚಾರ್ಟ್ ತಯಾರಿಸಲು ಸೂಚಿಸುವುದು.<br>24.2 ಮಿಂಚು ಪಟ್ಟಿಗಳ ಸಹಾಯದಿಂದ ವಾಕ್ಯ ಮತ್ತು ಲೇಖನ ಚಿಹ್ನೆಗಳನ್ನು ಹೊಂದಿಸಿ ಬರೆಯಲು ತಿಳಿಸಿ.<br>24.3 ವಾಕ್ಯವೃಂದಗಳನ್ನು ನೀಡಿ ಸೂಕ್ತ ಸ್ಥಳಗಳಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನುಹಾಕಲು ಸೂಚಿಸಿ. |

| | | | | |
|---|---|---|---|---|
| 25 | * ಸ್ವಕಲಿಕೆಗಾಗಿ ಶಬ್ಧಕೋಶ, ವಿಶ್ವಕೋಶ ಮತ್ತುಇತರೆ ಆಕರ ಸಾಹಿತ್ಯಗಳನ್ನು ಬಳಸುವರು. | * ವಿವಿಧ ಸಂದರ್ಭಗಳಲ್ಲಿ ಶಬ್ಧಕೋಶ, ವಿಶ್ವಕೋಶಗಳನ್ನು ಬಳಸುವ ಅಭ್ಯಾಸಮತ್ತು ರಚಿಸುವ ಸಾಮರ್ಥ್ಯವನ್ನುಗಳಿಸಿ ಕೊಳ್ಳುತ್ತನೆ. | 25.1 ನನ್ನನ್ನು ನೋಡಿ, ಅರ್ಥ ಹಿಡಿ<br><br>25.2 ನಮ್ಮದೊಂದು ನಿಘಂಟು<br><br>25.3 ಕವಿ - ಕೋಶ | 25.1ಹಲವು ಪದಗಳನ್ನು ನೀಡಿ ಅವುಗಳ ಅರ್ಥವನ್ನು ನಿಘಂಟಿನಲ್ಲಿ ಹುಡುಕಲು ಮಾರ್ಗದರ್ಶನ ಮಾಡಿರಿ. ಇದರೊಂದಿಗೆ ಆ ಪದಗಳ ಸಮನಾರ್ಥಕ, ವಿರುದ್ಧಾರ್ಥಕ, ನಾನಾರ್ಥ ಪದಗಳನ್ನುಬರೆಯಲು ಪ್ರೇರೇಪಿಸಿ.<br>ಉದಾ: ಭೂಮಿ = ಧರೆ, ವಸುಂಧರೆ, ಪೃಥ್ವಿ, ಇಳೆ, ಅಧಿತಿ ....<br>25.2 ಯಾವುದಾದರು ಒಂದು ಪದ್ಯವನ್ನು ನೀಡಿ ಅದರಲ್ಲಿನ ಪದಗಳನ್ನುಅಕಾರಾದಿಯಾಗಿ ಪಟ್ಟಿ ಮಾಡಿ ಅವುಗಳ ಅರ್ಥ ಬರೆದು ನಿಘಂಟನ್ನು ರಚಿಸಲು ತಿಳಿಸಿ.<br><br>25.3 ಎಂಟನೇ ತರಗತಿ ಕವಿಗಳ ಕುರಿತು ವಿಶ್ವಕೋಶ ರಚಿಸಲು ತಿಳಿಸಿ. |
| 26 | * ಛಂದಸ್ಸು, ಅಲಂಕಾರಗಳ ಮೂಲಾಂಶಗಳನ್ನು ಗುರುತಿಸಿ ಲಕ್ಷಣಗಳನ್ನು ಅಭಿವ್ಯಕ್ತಿಸುವರು. | * ಛಂದಸ್ಸಿನ ಪ್ರಕಾರಗಳ ಲಕ್ಷಣಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 26.1 ಪ್ರಸ್ತಾರ ಹಾಕು<br><br>26.2 ನನ್ನ ಪದ್ಯ – ನನ್ನ ಪ್ರಸ್ತಾರ<br>26.3 ಛಂದೋಬಂಧ – ಸಿಗುವುದು ಆನಂದ | 26.1 ಸರಳಪದಗಳು/ ಪದ್ಯದ ಪಾದಗಳನ್ನು ನೀಡಿ ಪ್ರಸ್ತಾರ ಹಾಕಲು ಸೂಚಿಸುವುದು.<br>26.2 ತನಗಿಷ್ಟವಾದ ಪದ್ಯದ ಚರಣವೊಂದಕ್ಕೆ ಪ್ರಸ್ತಾರ ಹಾಕಲು ಸೂಚಿಸಿ.<br>26.2ಭಾಮಿನಿಷಟ್ಪದಿಯ ಒಂದು ಚರಣವನ್ನು ನೀಡಿ ಅದಕ್ಕೆ ಪ್ರಸ್ತಾರ ಹಾಕಿಸಿ, ಗಣ ವಿಂಗಡಿಸಿ ಅದರ ಲಕ್ಷಣವನ್ನುತಿಳಿಸುವಂತೆ ಸೂಚಿಸಿ. |

| | | | | |
|---|---|---|---|---|
| 27 | | * ಅಲಂಕಾರಗಳ ಲಕ್ಷಣಗಳನ್ನುಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 27.1ಹೋಲಿಸು – ವಾಕ್ಯ ರಚಿಸು<br><br>27.2 ಅಲಂಕಾರ ಗುರುತಿಸಿ<br>27.3ಸಮನ್ವಯಗೊಳಿಸಿ | 27.1 ಹೋಲಿಕೆಯುಳ್ಳ ಕೆಲವು ಪದಗಳನ್ನು ನೀಡಿ ಅವುಗಳಿಂದ ಉಪಮಾಲಂಕಾರದ ವಾಕ್ಯಗಳನ್ನು ಮಾಡಲು ಸೂಚಿಸುವುದು.<br><u>ಮಾದರಿ:</u> ಮಗು – ಚಂದ್ರ → ಮಗುವಿನ ಮುಖವು ಚಂದ್ರನಂತೆ ಹೊಳೆಯುತ್ತಿದೆ.<br><u>ಉದಾ:</u> ಹುಡುಗಿ – ನವಿಲು, ಶಿವಾಜಿ – ಸಿಂಹ, ಮೋಡ – ಹತ್ತಿ ಇತ್ಯಾದಿ<br>27.2 ಅಲಂಕಾರಿಕ ವಾಕ್ಯಗಳನ್ನು ನೀಡಿ ಅವುಗಳಲ್ಲಿರುವ ಅಲಂಕಾರವನ್ನು ಗುರುತಿಸಲು ತಿಳಿಸಿ.<br>27.3 ಹಿಂದಿನ ತರಗತಿಯ ಪಠ್ಯದಲ್ಲಿರುವ ಅಲಂಕಾರಯುಕ್ತ ವಾಕ್ಯಗಳನ್ನು ಲಕ್ಷಣದೊಂದಿಗೆ ಸಮನ್ವಯಗೊಳಿಸುವಂತೆ ಸೂಚಿಸುವುದು. |
| 28 | * ಭಾಷೆಯನ್ನು ಜೀವನದ ವಿವಿಧ ಸಂದರ್ಭಗಳಲ್ಲಿವ್ಯವಹಾರಿಕವಾಗಿ ಲಿಖಿತವಾಗಿ ಬಳಸುವರು. | * ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ತಮ್ಮ ಭಾಷಾ ಶೈಲಿಯಲ್ಲಿ ಅಭಿವ್ಯಕ್ತಿಸುತ್ತಾರೆ. | 28.1 ವಾಕ್ಯ - ಬಂಧ<br><br>28.2 ನನ್ನ ನೆಚ್ಚಿನ ಪ್ರಬಂಧ<br>28.3 ಬಂಧ - ಪ್ರಬಂಧ | 28.1 ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಬಿಡಿ ವಾಕ್ಯಗಳನ್ನು ರಚಿಸಲು ತಿಳಿಸಿ, ನಂತರ ಅದೇ ವಾಕ್ಯಗಳನ್ನು ಪ್ರಬಂಧ ರಚನಾ ಕ್ರಮವನ್ನು ಅನುಸರಿಸಿ ಬರೆಯಲು ತಿಳಿಸಿ.<br>28.2 ತನಗಿಷ್ಟವಾದ ವಿಷಯ, ವಿಚಾರವನ್ನು ಕುರಿತು ಪ್ರಬಂಧ ರಚಿಸಲು ತಿಳಿಸುವುದು.<br><br>28.3 ಒಂದು ನಿರ್ದಿಷ್ಟ ವಿಷಯವನ್ನು ನೀಡಿ ಪ್ರಬಂಧ ರಚನಾ ಕ್ರಮವನ್ನು ಅನುಸರಿಸಿ ಪ್ರಬಂಧ ರಚಿಸಲು ಸೂಚಿಸುವುದು. |
| 29 | | * ಭಾಷೆಯನ್ನು ವ್ಯಾವಹಾರಿಕವಾಗಿಬಳಸುವ | 29.1 ಪತ್ರ ಬರೆ – ಪರಿಹಾರ ಕಂಡುಕೋ | 29.1 ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ವ್ಯಕ್ತಿಗೆ/ಸಂಸ್ಥೆಗೆ ಪತ್ರವನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. |

| | | | | |
|---|---|---|---|---|
| | | ಸಾಮರ್ಥ್ಯವನ್ನುಗಳಿಸುತ್ತಾರೆ. | | ಉದಾ: ನೀರಿನ ಸಮಸ್ಯೆ ಕುರಿತು – ಗ್ರಾಮ ಪಂಚಾಯಿತಿಗೆ<br>ಬ್ಯಾಂಕ್ ಖಾತೆ ತೆರೆಯಲು – ಬ್ಯಾಂಕ್ ವ್ಯವಸ್ಥಾಪಕರಿಗೆ ವಿದ್ಯುತ್ ಸಮಸ್ಯೆ ಕುರಿತು – ವಿದ್ಯುತ್ ಮಂಡಳಿಗೆ ಮುಂತಾದ ಸಂದರ್ಭಗಳು |
| | | | 29.2 ಪತ್ರ ಬಾಂಧವ್ಯ | 29.2 ತನ್ನ ಕುಟುಂಬದ ಯಾರಾದರೊಬ್ಬ ವ್ಯಕ್ತಿಗೆ/ ಬಂಧುಬಾಂಧವರಿಗೆ/ಸ್ನೇಹಿತರಿಗೆ ತನಗಿಷ್ಟವಾದ ವಿಷಯದ ಕುರಿತು ಪ್ರ ಬರೆಯಲು ತಿಳಿಸಿ. |
| | | | 29.3 ವರದಿ ಪತ್ರ | 29.3 ಶಾಲೆಯಲ್ಲಿ ನಡೆದ ಯಾವುದಾದರೊಂದು ಸಮಾರಂಭವನ್ನು ಕುರಿತು ದಿನಪತ್ರಿಕೆಗಳಿಗೆ ಕಳುಹಿಸಲು ವರದಿ ಸಿದ್ಧಪಡಿಸಲು ತಿಳಿಸಿ. |
| 30 | | * ಗಾದೆ ಮಾತುಗಳನ್ನು ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ. | 30.1 ನನ್ನರ್ಥ ತಿಳಿಸಿ<br>30.2 ನನ್ನರ್ಥ ಹೇಳಿ | 30.1 ಅಪೂರ್ಣ ಗಾದೆಗಳ ಮಿಂಚುಪಟ್ಟಿಗಳನ್ನು ನೀಡಿ ಅವುಗಳನ್ನು ಪೂರ್ಣಗೊಳಿಸುವಂತೆ ಸೂಚಿಸುವುದು.<br>30.2 ಗಾದೆಗಳು ಮತ್ತು ಅವುಗಳ ಅರ್ಥದ ಮಿಂಚು ಪಟ್ಟಿಗಳನ್ನು ತಯಾರಿಸಿಕೊಂಡು ಒಂದು ಗುಂಪಿಗೆ ಗಾದೆಗಳನ್ನು, ಮತ್ತೊಂದು ಗುಂಪಿಗೆ ಅರ್ಥಗಳ ಮಿಂಚು ಪಟ್ಟಿಗಳನ್ನು ನೀಡಿ ಅವುಗಳನ್ನು ಹೊಂದಿಸಲು ತಿಳಿಸಿ. |
| | | | 30.3 ಗಾದೆ ವಿಸ್ತಾರ | 30.3 ಹಲವು ಗಾದೆಗಳನ್ನು ನೀಡಿ ಅವುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿಸಿ. |